ಕೃಷಿಯಿಂದ ಬದುಕು

# ಕಾಳಪ್ಪರ ಸಮಗ್ರ ಕೃಷಿ ವಿಧಾನ

ದೇಸಿ ಬಿತ್ತನೆ ಬೀಜಗಳ ಸಂರಕ್ಷಣೆ ಸಂವರ್ಧನೆ ಮಾಡುತ್ತಿರುವ ಪಿರಿಯಾಪಟ್ಟಣ ತಾ. ಹಿಟ್ನೆಹೆಬ್ಬಾಗಿಲು ಗ್ರಾಮದ ಕಾಳಪ್ಪ ಅವರ ಕುರಿತು 12.07.2020ರಲ್ಲಿ ಲೇಖನ ಬರೆಯುವ ಅವಕಾಶವಾಗಿತ್ತು. ಅಂದಿನಿಂದ ಹಲವು ಸಲ ಅವರ ತೋಟಕ್ಕೆ ಭೇಟಿಕೊಟ್ಟು ಅವರು ಅನುಸರಿಸುತ್ತಿರುವ ಪದ್ಧತಿಗಳ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದೇವೆ. ಆದರೆ ಮೊನ್ನೆ ಇವರ ಹೊಲ ನೋಡಿದಾಗ What a transformation ಎಂದು ಮನಸ್ಸಿನಲ್ಲೇ ಸಂತಸಪಟ್ಟೆ. ಮೂಲತಃ ತಂಬಾಕು ಬೆಳೆಯುತ್ತಿದ್ದ ಕಾಳಪ್ಪ ಕಳೆದ ಒಂದು ದಶಕದಲ್ಲಿ ತನ್ನ 2.5 ಎಕರೆ ಜಮೀನನ್ನು ಜೀವವೈವಿಧ್ಯ ತಾಣವಾಗಿ ಪರಿವರ್ತಿಸಿದ್ದಾರೆ. ಮೊದ ಮೊದಲು ತಿಪ್ಪೆ ಗೊಬ್ಬರ ಮತ್ತಿತ್ತರ ಸಾವಯವ ಗೊಬ್ಬರ ಬಳಸುತ್ತಿದ್ದ ಕಾಳಪ್ಪ ಈಸಲ ಯಾವುದೇ ಗೊಬ್ಬರ ಬಳಸದೆ ಕೃಷಿ ಮಾಡಿದ್ದಾರೆ. ಆದರೂ ಉತ್ತಮವಾದ ಇಳುವರಿ ಪಡೆದಿರುವುದು ಅವರ ಜಮೀನಿನ ಮಣ್ಣು ಎಷ್ಟರಮಟ್ಟಿಗೆ ಫಲವತ್ತಾಗಿದೆ ಎಂದು ತಿಳಿಸುತ್ತದೆ.

ಸಹಜ ಸಮೃದ್ಧ ಸಂಸ್ಥೆಯ ಆಶಾ ಕುಮಾರಿ ಅವರ ಮಾರ್ಗದರ್ಶನದಲ್ಲಿ ತಂಬಾಕನ್ನು ಬಿಟ್ಟು ದೇಸಿ ಸೊಪ್ಪು ತರಕಾರಿ ಬಿತ್ತನೆ ಬೀಜ ಉತ್ಪಾದನೆಯಲ್ಲಿ ಹೇಗೆ ತೊಡಗಿಸಿಕೊಂಡರು ಎಂದು ಹಳೆಯ ಲೇಖನದಲ್ಲಿ ತಿಳಿಸಿದ್ದೇವೆ. ಆದರೆ ಪ್ರಸ್ತುತ ಕಾಳಪ್ಪ ಬೀಜೋತ್ಪಾದನೆಯೊಂದಿಗೆ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಸುಸ್ಥಿರ ಜೀವನ ಸಾಗಿಸುತ್ತಿರುವ ಕುರಿತು ತಿಳಿಸುವ ಪ್ರಯತ್ನವಾಗಿದೆ.

### ನಿವೃತ್ತ ಜೀವನಕ್ಕೆ ತೋಟಗಾರಿಕೆ ಮತ್ತು ಅರಣ್ಯ ಕೃಷಿ

ನನ್ನ ಜಮೀನು ಊರಾಚೆ ಇದೆ. ಮನೆಯಿಂದ ಇಲ್ಲಿಗೆ ಸುಮಾರು 3ಕಿಮೀ ದೂರ ನಡೆದು ಬರಬೇಕು. ಅದರ ಜೊತೆ ಜಮೀನಿನ ಪಕ್ಕದಲ್ಲಿ ಗುಡ್ಡವಿದ್ದು ನವಿಲು, ಕಾಡು ಹಂದಿ ಹಾವಳಿ ಇದೆ. ಮೈಯಲ್ಲಿ ಶಕ್ತಿ ಇರುವವರೆಗೆ ಬೀಜೋತ್ಪಾದನೆ ಮಾಡುತ್ತೇನೆ. ಆದರೆ ರೈತರಿಗೂ ನಿವೃತ್ತಿ ಜೀವನ ಬೇಕಲ್ಲವೇ? ಅದಕ್ಕಾಗಿ ಈಗಿನಿಂದಲೇ ಯೋಜನೆ ರೂಪಿಸಿದ್ದೇನೆ. 2.5 ಎಕರೆ ಜಮೀನನ್ನು ವಿವಿಧ ತಾಕುಗಳಾಗಿ ವಿಂಗಡಿಸಿ ಇಳಿಜಾರಿಗೆ ಅಡ್ಡಲಾಗಿ ಪ್ರತಿ 60 ಅಡಿಗೆ ಒಂದು ಬದು ನಿರ್ಮಿಸಿದ್ದೇವೆ. ಬದುವಿನ ಮೇಲೆ ಅರಣ್ಯ ಪ್ರಭೇದದ ಹೆಬ್ಬೇವು, ಮಹಾಘನಿ ಸಸ್ಯಗಳನ್ನು ಬೆಳೆಸಿದ್ದೇನೆ. ಈ ಮರಗಳ ಕೆಳಗೆ ಹುತ್ತರಿ ಗೆಣಸು ಜಾತಿಯ ಗೆಡ್ಡೆಗಳನ್ನು ಬಿತ್ತಿದ್ದೇನೆ. ಈ ಹುತ್ತರಿ ಗೆಣಸಿನ ಜಾತಿಯ ಬಳ್ಳಿ ಮರವನ್ನು ಎಷ್ಟು ಏರಿ ಚೆನ್ನಾಗಿ ಬೆಳೆಯುತ್ತದೋ ಇತ್ತ ಬುಡದಲ್ಲಿ ಉತ್ತಮವಾದ ಗೆಣಸು ದೊರೆಯುತ್ತದೆ. ಎರಡು ಅರಣ್ಯ ಪ್ರಭೇದದ ಮರಗಳ ನಡುವೆ ನುಗ್ಗೆ, ಮರಗೆಣಸು, ಲಾವಂಚ, ನಿಂಬೆ ಹುಲ್ಲು, ಬಾಳೆ ಮತ್ತಿತರ ಸಸ್ಯಗಳನ್ನು ಬೆಳೆಸಲಾಗಿದೆ. ಅರಣ್ಯ ಪ್ರಭೇದದ ಮರಗಳು ಹತ್ತು ಇಪತ್ತು ವರ್ಷಗಳ ನಂತರ ದೊಡ್ಡ ಮೊತ್ತದ ಆದಾಯ ನೀಡಿದರೆ, ಬಾಳೆ, ನುಗ್ಗೆ ಮತ್ತು ಮರ ಗೆಣಸುಗಳು ಕಡಿಮೆ ಸಮಯದಲ್ಲಿ ನಿರಂತರ ಆದಾಯ ನೀಡುತ್ತವೆ.



### ಶ್ರೀಗಂಧ ಕೃಷಿ

ಸುಮಾರು 6 ಗುಂಟೆಯಲ್ಲಿ ಶ್ರೀಗಂಧ ಬೆಳೆಯುತ್ತಿದ್ದೇನೆ. ಶ್ರೀಗಂಧ ಪರಾವಲಂಬಿ ಸಸ್ಯವಾಗಿದ್ದು ಇದರ ಜೊತೆ ಒಂದೆರಡು ಹಣ್ಣಿನ ಗಿಡಗಳಿವೆ. ಈ ಸಸ್ಯಗಳನ್ನು ನೆಟ್ಟು 3 ವರ್ಷವಾಗಿದೆ, ಇನ್ನೂ ಕೆಲ ವರ್ಷಗಳು ಅಂತರ ಬೆಳೆಗಳನ್ನು ಬೆಳೆಯಬಹುದು. ಈ ವರ್ಷ ಶ್ರೀಗಂಧದ ಜೊತೆ ಅಂತರ ಬೆಳೆಯಾಗಿ 20 ಬಗೆಯ ರಾಗಿ ಬೆಳೆಯಲಾಗಿದೆ. ನಾಲ್ಕು ಅಡಿ ಅಗಲ ನೂರು ಅಡಿ ಉದ್ದದ ಮಡಿಗಳನ್ನು ಮಾಡಿ ಅದರಲ್ಲಿ ನಮ್ಮ ಪಾರಂಪರಿಕ ರಾಗಿ ತಳಿಗಳಾದ ಕರಿಮುದುಗ, ಬಿಳಿ ಮುದುಗ, ಜೇನು ಗೂಡು, ಜಗಳೂರು, ತೊದ್ದಲು ರಾಗಿ, ಕರಿ ಪಿಚಕಿ, ಅನ್ನಪೂರ್ಣ, ಇಬ್ಬನಿ ರಾಗಿ ಸೇರಿ ಇಪತ್ತು ಪ್ರಭೇದದ ರಾಗಿ ಬೆಳೆಯಲಾಗಿದೆ. ಈ ಎಲ್ಲಾ ರಾಗಿ ತಳಿಗಳು ನಮ್ಮ ಪ್ರದೇಶದಲ್ಲಿ ಅದರಲ್ಲೂ ಮಳೆಯಾಶ್ರಯದಲ್ಲಿ ಬೆಳೆಯುತ್ತವೆ. ಈ ತಳಿಗಳಿಗೆ ರೋಗ ನಿರೋಧಕ ಶಕ್ತಿ, ಬರ ಅಥವಾ ಅತಿವೃಷ್ಟಿ ಸಹಿಸಿಕೊಂಡು ಬೆಳೆಯುವ ಶಕ್ತಿಯಿದೆ. ಕೆಲ ಪ್ರಭೇದದ ರಾಗಿಯನ್ನು ನಾಲ್ಕು ವರ್ಷ ಸಂಗ್ರಹಿಸಿಟ್ಟರೂ ಏನು ಆಗುವುದಿಲ್ಲ.



**ಸುಧಾ ಸಂದೀಪ್**
ಎಂ.ಎಸ್ಸಿ ಕೃಷಿ, ಹುಣಸೂರು

### ಶ್ರೀ ಪದ್ಧತಿ ಭತ್ತ

ನಮ್ಮ ಜಮೀನು ಇರುವುದು ಎತ್ತರವಾದ ಇಳಿಜಾರು ಪ್ರದೇಶದಲ್ಲಿ. ಸುತ್ತಲೂ ಅರಣ್ಯ ಇಲಾಖೆಯ ನೀಲಗಿರಿ ತೋಪು ಇದೆ. ಹಾಗಾಗಿ ಅಂತರ್ಜಲದಲ್ಲಿ ನೀರು ಹೆಚ್ಚು ಸಿಗುವುದಿಲ್ಲ. ಇರುವ ಅಲ್ಪ ನೀರನ್ನು ಸರಿಯಾಗಿ ಬಳಸಿ ವಿವಿಧ ರೀತಿಯ ಬೆಳೆ ಬೆಳೆಯಲು ಪ್ರಯತ್ನಿಸುತ್ತಿದ್ದೇನೆ. ಮನೆಗೆ ಮತ್ತು ಮಾರಾಟಕ್ಕೆ ಸ್ವಲ್ಪ ಜಾಗದಲ್ಲಿ ಶ್ರೀ ಪದ್ಧತಿ ಅನ್ವಯ ನೀರು ನಿಲ್ಲಿಸದೆ ಕೇವಲ ಅಗತ್ಯವಿದ್ದಾಗ ಮಾತ್ರ ನೀರು ಕೊಡುವ

ಮೂಲಕ ಅನೇಕ ರೀತಿಯ ಔಷಧೀಯ ಭತ್ತದ ತಳಿಗಳನ್ನು ಬೆಳೆಯುತ್ತಿದ್ದೇನೆ. ನವರ, ಕಪ್ಪು ಅಕ್ಕಿ, ದೊಡ್ಡಿ ಭತ್ತ ಬಹಳ ಚೆನ್ನಾಗಿ ಬೆಳೆದಿದೆ. ಇದರಲ್ಲೂ ಅಂತರ ಬೆಳೆಯಾಗಿ ದಂಟಿನ ಸೊಪ್ಪು, ಬೆಂಡೆ, ಟಮೋಟ ಬೆಳೆಸಿದ್ದೇನೆ.

### ನಾಟಿ ಮರ ತೊಗರಿಯ ಕಮಾಲ್

ನಾಟಿ ತೊಗರಿಯ ಬೇಳೆಯ ಗಾತ್ರ ಚಿಕ್ಕದ್ದು. ಆದರೆ ಅದ್ಭುತ ರುಚಿ. ನಾಟಿ ತಳಿಗಳು ಇಳುವರಿ ನೀಡುವುದಿಲ್ಲ ಎನ್ನುವವರು ನಮ್ಮ ಹೊಲಕ್ಕೆ ಭೇಟಿಕೊಟ್ಟು ನೋಡಬೇಕು. ಒಂದೇ ಗಿಡದಲ್ಲಿ ಒಂದು ಕೆಜಿ ಒಣ ಕಾಳು ಉತ್ಪಾದನೆಯಾಗಿದೆ. ಇದು ಹೈಬ್ರಿಡ್ ತಳಿಗಳಿಗೆ ಸವಾಲು ಹಾಕುವಷ್ಟು ಚೆನ್ನಾಗಿ ಬೆಳೆದಿದೆ. ಒಮ್ಮೆ ಬಿತ್ತಿದ್ದರೆ ಹಲವಾರು ವರ್ಷ ಬೆಳೆಯಬಲ್ಲ ಮರ ತೊಗರಿಯನ್ನು ಸಹ ಬೆಳೆಯಲಾಗಿದೆ. ಕಾಯಿ ಕಟಾವು ಮಾಡಿ ಬುಡ ಕತ್ತಿರಿಸಿದರೆ ಮತ್ತೆ ಚಿಗರಿ ಇಳುವರಿ ನೀಡುತ್ತದೆ ಈ ಪ್ರಭೇದ.

### 15 ಗುಂಟೆಯಲ್ಲಿ ಒಂದು ಕುಟುಂಬ ಸ್ವಾವಲಂಬಿ ಜೀವನ ಸಾಗಿಸಬಹುದು

ನಾವು 15 ಗುಂಟೆಯಲ್ಲಿ ಮನೆಗೆ ಬೇಕಾದ ಸೊಪ್ಪು-ತರಕಾರಿ, ದವಸ-ಧಾನ್ಯ ಬೆಳೆದು ಸ್ವಲ್ಪ ಜಾಗದಲ್ಲಿ ಮನೆ ಕೊಟ್ಟಿಗೆ ನಿರ್ಮಿಸಿ ಸ್ವಾವಲಂಬಿ ಜೀವನ ನಡೆಸಬಹುದು. ಎರಡು ತೆಂಗಿನ ಮರ, ಸೀಬೆ, ಸಪೋಟ, ಪಪ್ಪಾಯ ಮತ್ತಿತ್ತರ ಹಣ್ಣಿನ ಗಿಡಗಳು ಬದುಗಳ ಮೇಲೆ ಬೆಳೆಯಬಹುದು. ಉಳಿದಂತೆ ರಾಗಿ, ತೊಗರಿ, ಜೋಳ, ಸಾಸಿವೆ, ನೆಲ ಗಡಲೆ, ಸಾಸಿವೆ, ಹೆಸರು, ಉದ್ದು ಹಲಸಂದೆ, ಅವರೆ, ಚಪ್ಪರದ ಅವರೆ, ಸೇವಂತಿಗೆ, ಕನಕಾಂಬರ, ಮಲ್ಲಿಗೆ ಇತ್ಯಾದಿ ರೀತಿಯ ಗಿಡಗಳನ್ನು ಎರಡೆರಡು ಸಾಲು ಬೆಳೆಸಿದರೆ ಸಾಕು. ಮನೆಗೆ ಬೇಕಾದ ಬಹುತೇಕ ಧಾನ್ಯಗಳು ಹೂವು, ಎಣ್ಣೆಕಾಳು ಎಲ್ಲವೂ ಲಭಿಸುತ್ತದೆ. ಬೇಸಿಗೆಯಲ್ಲಿ ಭತ್ತ ಬೆಳೆದರೆ ವರ್ಷಪೂರ್ತಿ ಬಳಸಬಹುದು. ಸ್ವಲ್ಪ ಜಾಗದಲ್ಲಿ ಸಿರಿಧಾನ್ಯದ ಕೃಷಿಯೂ ಮಾಡಬಹುದು. ಕೊರಲೆ ರೀತಿ ಸಿರಿಧಾನ್ಯ ಮರದ ನೆರಳಿನಲ್ಲೂ ಬರುತ್ತದೆ. ಹೀಗೆ ಮನೆಗೆ ಬೇಕಾದ ಅಷ್ಟೂ ಪದಾರ್ಥಗಳು ನಾವೇ ಬೆಳೆಯಬಹುದು ಎಂದು ಪ್ರತ್ಯಕ್ಷವಾಗಿ ತೋರಿಸಿದ್ದೇನೆ.

### ಬಗೆ ಬಗೆಯ ಗೆಡ್ಡೆ ಗೆಣಸಿನ ಕೃಷಿ

ಭಾರತದ ಬೇರೆ ಬೇರೆ ಪ್ರಾಂತಗಳಿಂದ ಸಂಗ್ರಹಿಸಿ ತಂದ ವಿವಿಧ ತಳಿಗಳ ಅರಿಶಿಣ, ಶುಂಠಿ, ಕಸ್ತೂರಿ ಅರಿಶಿಣ ಕಪ್ಪು ಅರಿಶಿಣ, ಹಸಿರು ಬಣ್ಣದ ಅರಿಶಿಣ ಸೇರಿ ಹಲವು ಬಗೆಯ ಅರಿಶಿಣ ಬೆಳೆಯಲಾಗಿದೆ. ಸುಮಾರು 5 ಗುಂಟೆಯಲ್ಲಿ ಬಣ್ಣ ಬಣ್ಣದ ಸಿಹಿ ಗೆಣೆಸಿನ ಕೃಷಿ ಮಾಡಲಾಗಿದೆ. ಸಾಮಾನ್ಯವಾಗಿ ಸಿಹಿ ಗೆಣಸು ಎಂದರೆ ಮೇಲೆ ಕೆಂಪು ಬಣ್ಣ ಒಳಗೆ ಬಿಳಿ ಬಣ್ಣದ ತಿರುಳು ಇರುತ್ತದೆ. ಆದರೆ ನಾನು ಬೀಟ್ರೂಟ್ ರೀತಿಯ, ಕ್ಯಾರೆಟ್ ರೀತಿ ಬಣ್ಣ ಇರುವ 5 ಬಗೆಯ ಸಿಹಿ ಗೆಣಸು ಬೆಳೆಸಿ ಆಸಕ್ತರಿಗೆ ಬಿತ್ತನೆ ಮತ್ತು ಗೆಣಸು ಸವಿಯಲು ಮಾರಾಟಮಾಡುತ್ತಿದ್ದೇನೆ.

### ತೋಟಗಾರಿಕೆ ಬೆಳೆಯ ಮಧ್ಯೆ ಸೊಪ್ಪು ತರಕಾರಿ

ಮೂರು ವರ್ಷಗಳಿಂದ ಮೈಸೂರಿನ ವಿಜಯನಗರ ಭಾನುವಾರದ ರೈತರ ಸಂತೆಯಲ್ಲಿ ಸಖತ್ ಸೊಪ್ಪು ಎನ್ನುವ ರೈತರ ಸಂತೆ ನಡೆಸುತ್ತೇವೆ. ಇಲ್ಲಿ ಬೆಳೆದ ಸೊಪ್ಪು ತರಕಾರಿ ನೇರವಾಗಿ



ಗ್ರಾಹಕರಿಗೆ ಮಾರಾಟ ಮಾಡುತ್ತೇನೆ. ಇದಕ್ಕಾಗಿ ಪ್ರತಿವಾರ ಕಟಾವು ಮಾಡಲು ಸಿದ್ಧವಾಗುವ ಹಾಗೆ ಸೊಪ್ಪು ತರಕಾರಿ ಬೆಳೆಯಬೇಕು. 15 ಗುಂಟೆಯಲ್ಲಿ ಪ್ರತಿ 10 ಅಡಿಗೊಂದು ಬದು ನಿರ್ಮಿಸಿ ಅದರ ಮೇಲೆ ನಿಂಬೆ, ಸೀಬೆ, ಸೀತಾಫಲ, ಸಪೋಟ, ಪಪ್ಪಾಯ, ಹಲಸು, ಮಾವು, ಚಕ್ಕೆ, ನಕ್ಷತ್ರ ನೇರಳೆ, ವಾಟರ್ ಆಪಲ್ ಇತ್ಯಾದಿ ಹಣ್ಣಿನ ಗಿಡ ಬೆಳೆಸಲಾಗಿದೆ. ಇವುಗಳನ್ನು ಎತ್ತರಕ್ಕೆ ಬೆಳೆಯಲು ಬಿಡದೆ ಪ್ರೂನಿಂಗ್ ಮಾಡುತ್ತೇವೆ. ಇದೇ ತಾಕಿನಲ್ಲಿ ಉದ್ದದ ಮಡಿಗಳನ್ನು ಮಾಡಿ ಒಂದೊಂದರಲ್ಲಿ ಒಂದು ಬಗೆಯ ಸೊಪ್ಪು ತರಕಾರಿ ಬೆಳೆಯುತ್ತೇವೆ. ಕ್ಯಾರೆಟ್, ಬೀನ್ಸ್, ಪಾಲಾಕ್, ಮೆಂತ್ಯೆ, ದಂಟು, ಸಂಬಾರ ರೀತಿಯ ಸೊಪ್ಪು ತರಕಾರಿಗಳನ್ನು ಹಂತ ಹಂತವಾಗಿ ನಾಟಿ ಮಾಡುತ್ತೇನೆ. ಇದರಿಂದ ಪ್ರತಿ ವಾರ ಕಟಾವಿಗೆ ಬರುತ್ತದೆ.

ಈ ಎಲ್ಲಾ ಪ್ರಯೋಗಗಳನ್ನು ಸಾರ್ವಜನಿಕರಿಗೆ ತೋರಿಸಬೇಕು ದೇಸಿ ಬಿತ್ತನೆ ಬೀಜಗಳ ಮಹತ್ವ ಎಲ್ಲರೂ ಅರಿತು ತಮ್ಮ ತಮ್ಮ ಗ್ರಾಮಗಳಲ್ಲಿ ದೇಸಿ ತಳಿಗಳ ಕೃಷಿ ಮಾಡಬೇಕು ಎಂದು ತಿಳಿಸಲು ಕಳೆದ ಭಾನುವಾರ ಗೋಪಾಲ್ಸ್ ತಂಡದಿಂದ ಕ್ಷೇತ್ರೋತ್ಸವ ಏರ್ಪಡಿಸಲಾಗಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ನೂರಾರು ಆಸಕ್ತರು ಭಾಗವಹಿಸಿದ್ದು ನಿಜಕ್ಕೂ ಮುಂದಿನ ಪೀಳಿಗೆಗೆ ನಾಟಿ ತಳಿಗಳನ್ನು ಉಳಿಯುತ್ತವೆ ಎಂಬ ಭರವಸೆ ಮೂಡಿತು ಎಂದು ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು ಕಾಳಪ್ಪ. ನಿಮಗೂ ದೇಸಿ ಬಿತ್ತನೆ ಬೀಜಗಳು ಬೇಕಿದ್ದರೆ ಸಂಪರ್ಕಿಸಿ +91 94806 47369.

**(ತಮ್ಮ ಅಭಿಪ್ರಾಯವನ್ನು 9611766820ಗೆ ವಾಟ್ಸಾಪ್ ಮಾಡಿ. ಲೇಖನದ ಶೀರ್ಷಿಕೆ, ದಿನಾಂಕ ನಮೂದಿಸಿ)**